## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 92
**ಸದಸ್ಯರ ಹೆಸರು** : ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
**ಉತ್ತರಿಸುವವರು** : ಮಾನ್ಯ ಮುಖ್ಯಮಂತ್ರಿಯವರು.
**ಉತ್ತರಿಸಬೇಕಾದ ದಿನಾಂಕ** : 17.08.2026.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಗೃಹಲಕ್ಷ್ಮಿ' ಯೋಜನೆಯಡಿ ಮೃತಪಟ್ಟಿರುವ 68,776 ಮಹಿಳೆಯರ ಬ್ಯಾಂಕ್ ಅಕೌಂಟ್ ಗಳಿಗೆ ಸುಮಾರು ರೂ.79 ಕೋಟಿಗೂ ಅಧಿಕ ಹಣ (ರೂ.79,75,66,000) ಅಕ್ರಮವಾಗಿ ಪಾವತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | • ಗೃಹಲಕ್ಷ್ಮಿ ಯೋಜನೆಯಡಿ ನವೆಂಬರ್-2025ರ ಅಂತ್ಯಕ್ಕೆ ಮರಣ ಹೊಂದಿದ 68,772 ಫಲಾನುಭವಿಗಳ ಖಾತೆಗೆ ರೂ. 79.76 ಕೋಟಿ ಮೊತ್ತ ಮರಣಾ ನಂತರ ಜಮೆಯಾಗಿರುತ್ತದೆ.<br>• ಫಲಾನುಭವಿಗಳು ಮರಣ ಹೊಂದಿದ ನಂತರದಲ್ಲಿ ಅವರ ವಾರಸುದಾರರು ಮರಣ ಪ್ರಮಾಣ ಪತ್ರವನ್ನು ಪಡೆಯುವಲ್ಲಿ ವಿಳಂಬ ಮಾಡುವುದರಿಂದ ಅಂತಹವರ ಮರಣದ ಮಾಹಿತಿಯು ಇ-ಜನ್ಮ ಪೋರ್ಟಲ್‌ನಲ್ಲಿ ದಾಖಲಾಗಲು ವಿಳಂಬವಾಗುತ್ತಿದೆ. ಈ ಅವಧಿಯಲ್ಲಿ ಮರಣದ ಮಾಹಿತಿಯು ಲಭ್ಯವಿಲ್ಲದ ಕಾರಣದಿಂದಾಗಿ ಮಾತ್ರ ಮರಣಾ ನಂತರ ಧನಸಹಾಯ ಪಾವತಿಯಾಗಿರುತ್ತದೆ. ಇದು ಯಾವುದೇ ಅಕ್ರಮ ಪಾವತಿಯಾಗಿರುವುದಿಲ್ಲ. |
| ಆ) | ಮೃತಪಟ್ಟವರ ಹೆಸರಿಗೂ ದುಡ್ಡು, ಹೆಸರೇ ಇಲ್ಲದ ಬ್ಯಾಂಕ್‌ಗಳಿಗೂ ಹಣ ಪಾವತಿ ಹಾಗೂ ರಾಜ್ಯದಲ್ಲಿ ಅಸ್ತಿತ್ವದಲ್ಲೇ ಇಲ್ಲದ ಬ್ಯಾಂಕ್‌ಗಳ ಖಾತೆಗಳಿಗೂ ಗೃಹಲಕ್ಷ್ಮಿ ಯೋಜನೆಯ ಹಣ ಜಮೆಯಾಗಿರುವ ಆಘಾತಕಾರಿ ಲೋಪಗಳು ಬೆಳಕಿಗೆ ಬರಲು ಕಾರಣವೇನು; ಒಟ್ಟು 92 ಬ್ಯಾಂಕ್‌ಗಳಿಗೆ ಈ ರೀತಿ ತಪ್ಪು ಹಣ ಪಾವತಿಯಾಗಿದ್ದರೂ ಇಲಾಖೆಯು ಮುಂಚಿತವಾಗಿಯೇ ದತ್ತಾಂಶಗಳ ಪರಿಶೀಲನೆ (Data Verification) ನಡೆಸದಿರಲು ಕಾರಣಗಳೇನು; | • ಗೃಹಲಕ್ಷ್ಮಿ ಯೋಜನೆಯ ಧನಸಹಾಯ ಪಾವತಿ ಪ್ರಕ್ರಿಯೆಯು ಆಧಾರ್ ಆಧಾರಿತ ಪಾವತಿ ವ್ಯವಸ್ಥೆ (ABPS) ಮೂಲಕ ಅಂದರೆ, ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಮಾತ್ರ DBT ಮೂಲಕ ಪಾವತಿಸಲಾಗುತ್ತಿದೆ. ಆಧಾರ್ ಸೀಡಿಂಗ್ ಮಾಡಿಲ್ಲದ ಫಲಾನುಭವಿಗಳಿಗೆ ಧನಸಹಾಯ ಪಾವತಿ ಮಾಡಲಾಗುವುದಿಲ್ಲ.<br>• ಫಲಾನುಭವಿಯು ಸರ್ಕಾರದ ಸೌಲಭ್ಯವನ್ನು ಯಾವ ಬ್ಯಾಂಕ್ ಖಾತೆಗೆ ಪಡೆಯಬೇಕೆಂಬುದನ್ನು ಸ್ವತಃ ನಿರ್ಧರಿಸಬೇಕಿದ್ದು, ಫಲಾನುಭವಿಯು ಆಧಾರ್ ಸೀಡಿಂಗ್ ಮಾಡಿದ ಖಾತೆಗೆ ಜಮೆ ಮಾಡಲಾಗುತ್ತಿದೆ. ಅಸ್ತಿತ್ವದಲ್ಲಿರದ, ಹೆಸರೇ ಇಲ್ಲದ ಬ್ಯಾಂಕ್‌ಗಳಿಗೆ ಹಣ ಪಾವತಿ ಮಾಡಲು DBT ಪ್ರಕ್ರಿಯೆಯಲ್ಲಿ ಅವಕಾಶವಿರುವುದಿಲ್ಲ.<br>• ಮರಣ ಹೊಂದಿದ ಫಲಾನುಭವಿಗಳ ಮರಣ ಪ್ರಮಾಣ ಪತ್ರವನ್ನು ಕುಟುಂಬಸ್ಥರು ಪಡೆಯಲು ವಿಳಂಬ ಮಾಡುವುದರಿಂದ ಮರಣದ ಮಾಹಿತಿಯು ಧನಸಹಾಯ ಪಾವತಿ ಮಾಡುವ ಸಮಯದಲ್ಲಿ ಇ-ಜನ್ಮ ಪೋರ್ಟಲ್‌ನಲ್ಲಿ ಮಾಹಿತಿ ಲಭ್ಯವಿಲ್ಲದ ಕಾರಣದಿಂದಾಗಿ 98 ಬ್ಯಾಂಕ್‌ಗಳಿಗೆ ಮರಣಾ ನಂತರ ಕೆಲವು ಫಲಾನುಭವಿಗಳಿಗೆ ಧನಸಹಾಯ ಪಾವತಿಯಾಗಿರುತ್ತದೆ. |
| ಇ) | ಮೃತ ಮಹಿಳೆಯರ ಖಾತೆಗಳಿಗೆ ಜಮೆಯಾಗಿರುವ ಕೋಟ್ಯಾಂತರ ರೂಪಾಯಿ ಹಣವನ್ನು ವಾಪಸ್ ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈಗಾಗಲೇ ಕೆಲವು ಖಾತೆಗಳಿಂದ ಎಟಿಎಂ (ATM) ಮೂಲಕ ಹಣವನ್ನು ಡ್ರಾ ಮಾಡಿಕೊಂಡಿರುವುದು ನಿಜವೇ; ಹಾಗಿದ್ದಲ್ಲಿ, ಮೃತರ ಹೆಸರಿನಲ್ಲಿ ಅಕ್ರಮವಾಗಿ ಹಣ ಪಡೆದ ನಕಲಿ ಫಲಾನುಭವಿಗಳು ಯಾರು ಮತ್ತು ಅವರ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಮೊಕದ್ದಮೆಗಳೆಷ್ಟು; | • ಗೃಹಲಕ್ಷ್ಮಿ ಯೋಜನೆಯಡಿ ಮರಣಾ ನಂತರ ಜಮೆಯಾಗಿರುವ ಧನಸಹಾಯವನ್ನು ವಾಪಸ್ ಸರ್ಕಾರಕ್ಕೆ ಪಾವತಿ ಮಾಡುವ ಸಂಬಂಧ ಆರ್ಥಿಕ ಇಲಾಖೆಯು ನೀಡಿದ ಲೆಕ್ಕಶೀರ್ಷಿಕೆಗಳೊಂದಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ)ಯಿಂದ ವಿವರವಾದ ಪ್ರಮಾಣಿತ ಕಾರ್ಯಾಚರಣ ವಿಧಾನ (SOP)ಯನ್ನು ರೂಪಿಸಿ Flow Chartನೊಂದಿಗೆ ಸಂಬಂಧಿಸಿದ ಎಲ್ಲಾ ಬ್ಯಾಂಕ್‌ಗಳು ಹಾಗೂ ಅಂಚೆ ಕಛೇರಿಗಳಿಗೆ ನೀಡಿ ಮರಣ ಹೊಂದಿದ ಫಲಾನುಭವಿಗಳ ಖಾತೆಯಲ್ಲಿ ಉಳಿಕೆ ಇರುವ ಧನಸಹಾಯದ ಮೊತ್ತವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮಾ ಮಾಡಲು ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ, ಎಲ್ಲಾ ಬ್ಯಾಂಕ್‌ಗಳ ಮೂಲಕ ಸರ್ಕಾರಕ್ಕೆ ಜಮಾ ಮಾಡಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | • ಮರಣ ಹೊಂದಿದ ಫಲಾನುಭವಿಗಳ ಖಾತೆಗೆ ಜಮೆಯಾದ ಧನಸಹಾಯವನ್ನು ಹಿಂಪಡೆಯುವ ಸಂಬಂಧ ಸರ್ಕಾರದ ಕಾರ್ಯದರ್ಶಿಗಳು ಮತ್ತು ನಿರ್ದೇಶಕರ ಹಂತಗಳಲ್ಲಿ ಬ್ಯಾಂಕರ್‌ಗಳ ಸಭೆ ನಡೆಸಿ ಪ್ರತ್ಯೇಕವಾದ ಲೆಕ್ಕಶೀರ್ಷಿಕೆ ಸೃಜಿಸಿ, ಸದರಿ ಲೆಕ್ಕಶೀರ್ಷಿಕೆಗೆ ಧನಸಹಾಯ ಹಿಂಪಡೆಯಲು ಕ್ರಮವಹಿಸಲಾಗಿರುತ್ತದೆ.<br><br>• ಬ್ಯಾಂಕ್‌ನಲ್ಲಿ ಉಳಿಕೆ ಇದ್ದ ಮರಣ ಹೊಂದಿದ ಫಲಾನುಭವಿಗಳ ಖಾತೆಯಲ್ಲಿದ್ದ ಧನಸಹಾಯವನ್ನು ಕೆಲವೊಂದು ಫಲಾನುಭವಿಗಳ ಕುಟುಂಬದ ಸದಸ್ಯರು ATM ಮೂಲಕ ಡ್ರಾ ಮಾಡಿರುವ ಸಂಭವವಿರುವುದಾಗಿ ವಿವಿಧ ಸಭೆಗಳಲ್ಲಿ ಹಾಜರಿದ್ದ ಬ್ಯಾಂಕ್ ಪ್ರತಿನಿಧಿಗಳು ತಿಳಿಸಿದ್ದು, ಅಂತಹ ಸಂದರ್ಭದಲ್ಲಿ ಮೊತ್ತವನ್ನು Freeze ಮಾಡಲು / ಸರ್ಕಾರಕ್ಕೆ ಮರು ಭರಣ ಮಾಡಲು ಸಾಧ್ಯವಿಲ್ಲವೆಂದು ಸಹ ಬ್ಯಾಂಕ್‌ಗಳಿಂದ ತಿಳಿಸಿರುತ್ತಾರೆ.<br><br>• ನೋಂದಣಿಯಾದ ಅರ್ಹ ಫಲಾನುಭವಿಗಳ ಖಾತೆಗೆ DBT ಮೂಲಕ ಧನಸಹಾಯ ಜಮೆಯಾಗುವುದರಿಂದ ನಕಲಿ ಫಲಾನುಭವಿಗಳ ಖಾತೆಗೆ ಜಮೆಯಾಗಿರುವುದಿಲ್ಲ. |
| ಈ) | ಹೊರ ರಾಜ್ಯದ ಬ್ಯಾಂಕ್‌ಗಳಿಂದ ಮೃತ ಫಲಾನುಭವಿಗಳ ಪತ್ತೆ ಕಾರ್ಯಕ್ಕೆ ಮಾಹಿತಿ ಸಿಗುತ್ತಿಲ್ಲದಿರುವುದು ನಿಜವೇ; ಈ ಇಡೀ ಹಗರಣದ ತನಿಖೆಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇ-ಗವರ್ನೆನ್ಸ್ ಅಧಿಕಾರಿಗಳು ನಡೆಸಿರುವ ಸಭೆಯ ತೀರ್ಮಾನಗಳೇನು ಮತ್ತು ಭವಿಷ್ಯದಲ್ಲಿ ಇಂತಹ ಲೋಪಗಳು ಮರುಕಳಿಸದಂತೆ ತಡೆಯಲು ಸರ್ಕಾರ ಕೈಗೊಂಡಿರುವ ಕಠಿಣ ತಾಂತ್ರಿಕ ಸುಧಾರಣೆಗಳೇನು? | • ಗೃಹಲಕ್ಷ್ಮಿ ಯೋಜನೆಯ ಧನಸಹಾಯವು ಆಧಾರ್ ಸೀಡಿಂಗ್ ಆಧಾರಿತ ಪಾವತಿ ಪ್ರಕ್ರಿಯೆಯಾಗಿದ್ದು, RBI ಅಡಿಯಲ್ಲಿ ಬರುವ ಯಾವುದೇ ಬ್ಯಾಂಕ್‌ಗಳಲ್ಲಿ ಫಲಾನುಭವಿಯು ಖಾತೆ ತೆರೆದು ಆಧಾರ್ ಸೀಡಿಂಗ್ ಮಾಡಬಹುದಾಗಿದ್ದು, ಆಧಾರ್ ಸೀಡಿಂಗ್ ಮಾಡಿದ ಒಂದೇ ಖಾತೆಗೆ ಮಾತ್ರ ಧನಸಹಾಯ ಪಾವತಿಯಾಗಿರುತ್ತದೆ.<br><br>• ಮರಣ ಹೊಂದಿದ ನಂತರದಲ್ಲಿ ಪಾವತಿಯಾಗಿರುವ ಧನಸಹಾಯವನ್ನು ಸರ್ಕಾರಕ್ಕೆ ಪಾವತಿ ಮಾಡುವ ಬಗ್ಗೆ ದಿನಾಂಕ :08.09.2025 ಹಾಗೂ 19.06.2026 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ದಿನಾಂಕ: 25.08.2025, 05.05.2026, 18.06.2026, ಮತ್ತು 04.07.2026 ರಂದು ಅಧ್ಯಕ್ಷರು, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಉಪಸ್ಥಿತಿಯಲ್ಲಿ, ದಿನಾಂಕ:13.04.2026 ರಂದು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ, ದಿನಾಂಕ: 22.12.2025, 06.04.2026, 16.04.2026, 24.06.2026 ಮತ್ತು 18.07.2026 ಗಳಂದು, ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಉಪಸ್ಥಿತಿಯಲ್ಲಿ ದಿನಾಂಕ: 14.01.2026, 31.01.2026, 24.02.2026 ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಇ-ಆಡಳಿತ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಭೆಗಳನ್ನು ನಡೆಸಲಾಗಿದ್ದು, ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ.<br><br>ಗೃಹಲಕ್ಷ್ಮಿ ಯೋಜನೆಯಡಿ ಮರಣ ಹೊಂದಿದ ಫಲಾನುಭವಿಗಳ ಮಾಹಿತಿಯನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಪಿ.ಡಿ.ಒ. ರವರಿಂದ Reconcilation ಮಾಡಿಸಲು ಕೋರಿ ಆರ್.ಡಿ.ಪಿ.ಆರ್. ಇಲಾಖೆಗೆ ಪತ್ರಿಸಲಾಗಿದೆ. |

| | | |
|---|---|---|
| | | • ರಾಜ್ಯ ಮತ್ತು ಹೊರ ರಾಜ್ಯದ 98 ಬ್ಯಾಂಕ್‌ಗಳಿಗೆ ಮರಣಾನಂತರ ಜಮೆಯಾದ ಧನಸಹಾಯವನ್ನು ಹಿಂದಿರುಗಿಸುವ ಸಂಬಂಧ ರಾಜ್ಯಮಟ್ಟದ ಬ್ಯಾಂಕರ್‌ಗಳ ಸಮಿತಿ (SLBC) ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಂದ ಬ್ಯಾಂಕ್‌ಗಳಿಗೆ ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲು ನಿರ್ದೇಶನ ನೀಡಲಾಗಿದೆ. ಹಾಗೂ RBI ನಿಂದ ಖಾಸಗಿ ಬ್ಯಾಂಕ್‌ಗಳ ಮುಖ್ಯ ಕಛೇರಿಗಳ ಮಾಹಿತಿ ಪಡೆದು ಸರ್ಕಾರದ ಕಾರ್ಯದರ್ಶಿಗಳು ಮತ್ತು ನಿರ್ದೇಶಕರ ಹಂತಗಳಲ್ಲಿ ಸಭೆ ನಡೆಸಿ ಪ್ರತ್ಯೇಕವಾಗಿ ಆರ್ಥಿಕ ಇಲಾಖೆಯಿಂದ ಸೃಜಿಸಿರುವ ಲೆಕ್ಕಶೀರ್ಷಿಕೆಗೆ ಪಾವತಿಸಲು ಸೂಚನೆ ನೀಡಲಾಗಿದ್ದು, ಅದರಂತೆ, ಕ್ರಮವಹಿಸಲಾಗುತ್ತಿದೆ. ಈವರೆಗೆ ರೂ. 40.08 ಕೋಟಿಗಳನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡಲಾಗಿದೆ.<br>• ಪ್ರಸ್ತುತ, ಇ-ಜನ್ಮ ಪೋರ್ಟಲ್‌ನಲ್ಲಿ ನೋಂದಣಿಯಾಗದ ಮರಣ ಹೊಂದಿದ ಫಲಾನುಭವಿಗಳ ಮಾಹಿತಿಯನ್ನು, ಕೂಡಲೇ EDCSಗೆ ವರದಿ ಮಾಡಲು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ Loginನಲ್ಲಿ ಮರಣದ ಮಾಹಿತಿಯನ್ನು ನಮೂದಿಸಲು ಅವಕಾಶ ಕಲ್ಪಿಸಲಾಗಿದ್ದು, ಅದರಂತೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕ್ರಮವಹಿಸುತ್ತಿದ್ದು, ಮರಣದ ಮಾಹಿತಿ ತಿಳಿದ ಕೂಡಲೇ ಧನಸಹಾಯವನ್ನು ತಡೆಹಿಡಿಯಲಾಗುತ್ತಿದೆ. |

**ಸಂಖ್ಯೆ: ಮಮಇ 176 ಮಮಲ 2026**

(ಡಿ.ಕೆ. ಶಿವಕುಮಾರ್)
ಮುಖ್ಯಮಂತ್ರಿ

Scanned by CamScanner

# ಅನುಬಂಧ

| ಕ್ರ. ಸಂ. | ಸಭೆಯ ದಿನಾಂಕ | ಸಭೆಯ ಅಧ್ಯಕ್ಷತೆ | ತೆಗದುಕೊಂಡ ನಿರ್ಣಯಗಳು |
|---|---|---|---|
| 1 | 08.09.2025 ಹಾಗೂ 19.06.2026 | ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ | ಗೃಹಲಕ್ಷ್ಮಿ ಫಲಾನುಭವಿ ಮರಣ ಹೊಂದಿದ ನಂತರ ಮೃತರ ಖಾತೆಗೆ ಯೋಜನೆಯ ಹಣವನ್ನು ಡಿ.ಬಿ.ಟಿ. ಮಾಡುವುದನ್ನು ನಿಲ್ಲಿಸುವುದು, ಮರಣ ನಂತರ ಜಮೆಯಾಗಿದ್ದಲ್ಲಿ ಹಣವನ್ನು ಹಿಂಪಡೆಯಲು ಕ್ರಮಕೈಗೊಳ್ಳುವುದು ಮತ್ತು ಸಾವಿನ ಪ್ರಕರಣಗಳನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗುರುತಿಸುವುದು. |
| 2 | 25.08.2025, 05.05.2026, 18.06.2026 ಮತ್ತು 04.07.2026 | ಅಧ್ಯಕ್ಷರು, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಉಪಸ್ಥಿತಿಯಲ್ಲಿ | ಮರಣದ ನಂತರವು ಫಲಾನುಭವಿಗಳ ಖಾತೆಗೆ ಜಮಾ ಆಗಿರುವ ಸರ್ಕಾರದ ಹಣವನ್ನು ತಡೆಹಿಡಿಯಲು ಹಾಗೂ ಇನ್ನು ಮುಂದೆ ಸಂದಾಯವಾಗದಂತೆ ಕ್ರಮವಹಿಸಲು ಮತ್ತು ಈಗಾಗಲೇ ಸಂದಾಯವಾಗಿರುವ ಹಣವನ್ನು ಹಿಂಪಡೆಯಲು ಸೂಚನೆ ನೀಡಲಾಗಿರುತ್ತದೆ.<br>ಮರಣ ನಂತರ ಅಂಚೆ ಇಲಾಖೆಯಲ್ಲಿರುವ ಫಲಾನುಭವಿಗಳ ಖಾತೆಯಿಂದ ಹಾಗೂ ಪ್ರತಿ ಬ್ಯಾಂಕ್ ನಲ್ಲಿ ಫಲಾನುಭವಿಗಳ ಖಾತೆಗಳನ್ನು ಪರಿಶೀಲಿಸಿ, Unclaimed ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಲು ಸೂಚಿಸಿದರು.<br><br>ಗೃಹಲಕ್ಷ್ಮಿ ಯೋಜನೆಯಡಿ ಮರಣ ಹೊಂದಿರುವ ಫಲಾನುಭವಿಗಳ ಮಾಹಿತಿ ಪಡೆಯಲು ಪಡಿತರ ಚೀಟಿಯ ಡೇಟಾ ಬೇಸ್ ನ್ನು ಇಂದಿಕರಿಸಲು ಸೂಚಿಸಿದರು.<br>ಮೃತಪಟ್ಟ ಫಲಾನುಭವಿಗಳ ಖಾತೆಗೆ ಜಮೆಯಾಗಿರುವ ಹಣವನ್ನು ಸರ್ಕಾರಕ್ಕೆ ಹಿಂಪಡೆಯುವ ಕಾರ್ಯದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳು ಕಾರ್ಯನಿರ್ವಹಿಸಬೇಕೆಂದು ಸೂಚಿಸಿದರು. |
| 3 | 13.04.2026 | ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ | ಗೃಹಲಕ್ಷ್ಮಿ ಯೋಜನೆಯ ಮೃತ ಫಲಾನುಭವಿಗಳಿಗೆ ಯೋಜನೆಯ ಧನಸಹಾಯ ಪಾವತಿಯಾಗದಂತೆ, ತಡೆಗಟ್ಟುವ ನಿಟ್ಟಿನಲ್ಲಿ ವರ್ಷಕೊಮ್ಮೆ ಫಲಾನುಭವಿಗಳಿಂದ Biometric Authentication, Facial/Iris Recognition ಮಾಡಿಸಲು ಕ್ರಮವಹಿಸುವಂತೆ ಹಾಗೂ ಮೃತ ಫಲಾನುಭವಿಗಳ ಖಾತೆಗೆ ಜಮೆಯಾಗಿರುವ ಧನಸಹಾಯದ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕುಗಳು ಕೂಡಲೇ ಸರ್ಕಾರಕ್ಕೆ ಜಮೆ ಮಾಡಲು ಕ್ರಮವಹಿಸಲು SLBCಗೆ ಸೂಚಿಸಿದರು. |

| | | | |
|---|---|---|---|
| 4 | 22.12.2025, 06.04.2026, 16.04.2026, 24.06.2026 ಮತ್ತು 18.07.2026 | ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಉಪಸ್ಥಿತಿಯಲ್ಲಿ | ಮರಣ ಹೊಂದಿದ ಫಲಾನುಭವಿಗಳ ಖಾತೆಯಿಂದ ಧನಸಹಾಯದ ಮೊತ್ತವನ್ನು ಸರ್ಕಾರಕ್ಕೆ ಮರುಭರಣ ಮಾಡುವ ಬಗ್ಗೆ, ಕರ್ನಾಟಕದಲ್ಲಿರುವ ಬ್ಯಾಂಕ್ ಶಾಖೆಗಳಲ್ಲಿ ಖಾತೆಗಳನ್ನು ತೆರೆಯುವ ಬಗ್ಗೆ, ಮರಣ ಹೊಂದಿದ ದಿನಾಂಕದಿಂದ ಯೋಜನೆಯ ಧನಸಹಾಯವನ್ನು ತಡೆಹಿಡಿಯುವ ಬಗ್ಗೆ ಚರ್ಚಿಸಲಾಯಿತು.<br>ಮರಣ ಹೊಂದಿರುವ ಫಲಾನುಭವಿಗಳಿಗೆ ಗೃಹಲಕ್ಷ್ಮಿ ಯೋಜನೆಯ ಧನಸಹಾಯ ಪಾವತಿಯಾಗದಂತೆ ತಡೆಗಟ್ಟಲು ಫಲಾನುಭವಿಗಳಿಗೆ Bio metric Authentication ಮೂಲಕ ಅರ್ಜಿ ನವೀಕರಣ ಮಾಡಲು ಸೂಚಿಸಿದರು.<br>ಬ್ಯಾಂಕ್‌ಗಳಲ್ಲಿ ಮರಣ ಹೊಂದಿದ ಫಲಾನುಭವಿಗಳ ಖಾತೆಗಳಿಗೆ ಜಮೆಯಾಗಿರುವ ಧನಸಹಾಯ ಮೊತ್ತವನ್ನು ಹಿಂಪಡೆದು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವಂತೆ ಹಾಗೂ ಪ್ರತಿ ಮಾಹೆ ಇಲಾಖೆ ಲಿಖಿತ ರೂಪದಲ್ಲಿ ಮಾಹಿತಿಯನ್ನು ಸಲ್ಲಿಸಲು ಬ್ಯಾಂಕುಗಳಿಗೆ ಸೂಚಿಸಲಾಯಿತು.<br><br>ಖಾಸಗಿ ಬ್ಯಾಂಕ್ ಹಾಗೂ ಐ.ಪಿ.ಪಿ.ಬಿ. ರವರುಗಳ ಸಭೆ ನಡೆಸಿ ಮರಣ ಹೊಂದಿದ ಫಲಾನುಭವಿಗಳ ಖಾತೆಗಳಿಗೆ ಜಮೆಯಾಗಿರುವ ಧನಸಹಾಯ ಮೊತ್ತವನ್ನು ಹಿಂಪಡೆದು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವಂತೆ ಹಾಗೂ ಪ್ರತಿ ಮಾಹೆ ಇಲಾಖೆ ಲಿಖಿತ ರೂಪದಲ್ಲಿ ಮಾಹಿತಿಯನ್ನು ಸಲ್ಲಿಸಲು ಬ್ಯಾಂಕುಗಳಿಗೆ ಸೂಚಿಸಲಾಯಿತು |
| 5 | 14.01.2026, 31.01.2026 ಮತ್ತು 24.02.2026 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಇ-ಆಡಳಿತ ಇಲಾಖೆ | ಮರಣ ಹೊಂದಿದ ಫಲಾನುಭವಿಗಳಿಂದ ಹಿಂಪಡೆಯಲಾದ ಮೊತ್ತವನ್ನು ಡಿ.ಡಿ.ಓ.ಗಳು ಸರ್ಕಾರಕ್ಕೆ ಮರುಪಾವತಿ ಮಾಡುವ ಬಗ್ಗೆ, ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಂದ ಮರಣ ಹೊಂದಿದ ಫಲಾನುಭವಿಗಳ ಮಾಹಿತಿಯನ್ನು ಪಡೆದು ಸಿ.ಡಿ.ಪಿ.ಓಗಳು ತಮ್ಮ ಲಾಗಿನ್‌ನಲ್ಲಿ ನಮೂದಿಸಲು ಸೂಚಿಸಿದರು. |